# <u>ದಾಸರೆಂದರೆ ಪುರಂದರ ದಾಸರಯ್ಯ</u>

ರಚನೆ: ವ್ಯಾಸರಾಜ (ಅಂಕಿತ: ಶ್ರೀ ಕೃಷ್ಣ)

1. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Note:** The wordings in both the books above are fully matching. These wordings have been followed by the singer.

ರಾಗ: ಕಾಂಬೋಧಿ ತಾಳ: ಝಂಪೆ

ದಾಸರೆಂದರೆ ಪುರಂದರ ದಾಸರಯ್ಯ || ಪ ||
ವಾಸುದೇವ ಕೃಷ್ಣನ್ನ ಸೂಸಿ ಪೂಜಿಸುವ || ಅಪ ||

ಗ್ರಾಸಕಿಲ್ಲದೇ ಪೋಗಿ ಪರರ ಮನೆಗಳ ಪೊಕ್ಕು
ದಾಸನೆಂದು ತುಲಸಿ ಮಾಲೆ ಧರಿಸೀ
ಬೇಸರಿಲ್ಲದೆ ಅವರ ಕಾಡಿ ಬೇಡಿ ಬಳಲಿಸುತ
ಕಾಸುಗಳಿಸುವ ಪುರುಷ ಹರಿದಾಸನೇ || ೧ ||

ಡಂಭಕದಿ ಹರಿ ಸ್ಮರಣೆ ಮಾಡಿ ಜನರ ಮುಂದೆ
ಸಂಭ್ರಮದಿ ತಾನುಂಬ ಊಟ ಬಯಸಿ
ಅಂಬುಜೋದ್ಭವ ಪಿತನ ಆಗಮಗಳರಿಯದೆ
ತಂಬೂರಿ ಮೀಟಲವ ಹರಿದಾಸನೇ || ೨ ||

ಯಾಯಿವಾರವ ಮಾಡಿ ವಿಪ್ರರಿಗೆ ಮೃಷ್ಟಾನ್ನ
ಪ್ರೀಯದಲಿ ತಾನೊಂದು ಕೊಡದ ಲೋಭಿ
ಮಾಯ ಸಂಸಾರದಲಿ ಮಮತೆ ಹೆಚ್ಚಾಗಿಟ್ಟು
ಗಾಯನವ ಮಾಡಲವ ಹರಿದಾಸನೇ || ೩ ||

ಪಾಠಕನ ತೆರನಂತೆ ಪದಗಳನು ತಾ ಬೊಗಳಿ
ಕೂಟ ಜನರನವ ಸಂತೋಷಪಡಿಸಿ
ಗೂಟ ನಾಮಗಳಿಟ್ಟು ಕೊಟ್ಟರಿಯೇ ತಾನೆನುತ
ತೂಟಕವ ಮಾಡಲವ ಹರಿದಾಸನೇ || ೪ ||

ನೀತಿಯೆಲ್ಲವನರಿತು ನಿಗಮ ವೇದ್ಯನ ನಿತ್ಯ
ವಾತಸುತನಲ್ಲಿಹನ ವರ್ಣಿಸುತಲಿ
ಗೀತ ನರ್ತನದಿಂದ ಕೃಷ್ಣನ್ನ ಪೂಜಿಸುವ
ಪೂತಾತ್ಮ ಪುರಂದರ ದಾಸರಿವರಯ್ಯ || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

(ಇದನ್ನು ರಚಿಸಿದವರು ವ್ಯಾಸತೀರ್ಥರು (ವ್ಯಾಸರಾಯ ಸ್ವಾಮಿಗಳು); ಪುರಂದರ ದಾಸರ ದೀಕ್ಷಾ ಗುರುಗಳು, ಶಿಷ್ಯನು ತನ್ನ ಗುರುವನ್ನು ಹಾಡಿ ಹೊಗಳುವುದು ವಾಡಿಕೆ. ಪುರಂದರ ದಾಸರು ವ್ಯಾಸತೀರ್ಥರನ್ನು ಕುರಿತು ಹೀಗೆ ಹಲವು ಹಾಡುಗಳನ್ನು ರಚಿಸಿದ್ದಾರೆ. ಆದರೆ ಗುರು ಶಿಷ್ಯನನ್ನು ಮೆಚ್ಚಿಕೊಂಡು ಅವನನ್ನು ಪ್ರಶಂಸಿಸುವುದು ಅಪರೂಪ. ವ್ಯಾಸತೀರ್ಥರು ಪುರಂದರ ದಾಸರ ವ್ಯಕ್ತಿತ್ವದ ಮೇಲ್ಮೆಯನ್ನೂ, ಹರಿಭಕ್ತಿಯ ನೆಲೆಯನ್ನೂ ಅರಿತುಕೊಂಡಿದ್ದರು. ಅವರು ತಮ್ಮ ಶಿಷ್ಯನನ್ನು ಹಾಡಿ ಹೊಗಳಿದಂತೆಯೇ, ಅವರ ಗುರುಗಳಾದ ಶ್ರೀಪಾದರಾಜರೂ ತಮ್ಮನ್ನು ಹಾಡಿ ಹೊಗಳಿದ್ದು ಅವರ ನೆನಪಿನಲ್ಲಿದ್ದಿರಬೇಕು. ಶ್ರೀಪಾದರಾಜರು ತಮ್ಮ ಶಿಷ್ಯ ವ್ಯಾಸತೀರ್ಥರನ್ನು ಕುರಿತು ಹೀಗೆ ಹಾಡಿದ್ದಾರೆ:

ಇದರದಾವನು ನಿನಗೀ ಧರೆಯೊಳು
ಪದುಮನಾಭನ ದಾಸ ಪರಮೋಲ್ಲಾಸ

ವಾದಿತಿಮಿರಮಾರ್ತಾಂಡನೆಂದೆನಿಸಿದ
ವಾದಿ ಶರಭ ಭೇರುಂಡ ವ್ಯಾಸರಾಯ

ಯತಿಗಳೊಳಗೆ ನಿಮ್ಮಂದದವರುಗಳ
ಪ್ರತಿಗಾಣೆನು ಈ ಕ್ಷಿತಿಯೊಳು ವ್ಯಾಸರಾಯ

ಹಮ್ಮನಳಿದು ಶ್ರೀಪತಿ ರಂಗವಿಠಲನ್ನ
ಸುಮ್ಮಾನದಿಂ ಸೇವಿಪ ವ್ಯಾಸಮುನಿರಾಯ

**ಸೂಸಿ –** ಭಕ್ತಿಯನ್ನು ಸಿಂಪಡಿಸಿ.

**ಅಂಬುಜೋದ್ಭವ ಪಿತನ ಆಗಮಗಳು –** ಅಂಬುಜೋದ್ಭವ (ಬ್ರಹ್ಮನ) ಪಿತನೆಂದರೆ ವಿಷ್ಣು; ವಿಷ್ಣುವಿನ ನಾಭಿಕಮಲದಿಂದ ಚತುರ್ಮುಖ ಬ್ರಹ್ಮನು ಹೊರಬಂದನೆಂದು ಪ್ರತೀತಿ. ವಿಷ್ಣುವಿನ "ಆಗಮ"ಗಳೆಂದರೆ ಪಾಂಚರಾತ್ರ ಶಾಸ್ತ್ರ; ಭಾಗವತ ಧರ್ಮಕ್ಕೆ ಮೂಲಭೂತವಾದುದು. ಶ್ವೇತದ್ವೀಪದಲ್ಲಿ ನಾರಾಯಣನು ನಾರದನಿಗೆ ಈ ಶಾಸ್ತ್ರವನ್ನು ತಿಳಿಯ ಹೇಳಿದನೆಂದು ಮಹಾಭಾರತದ ನಾರಾಯಣೀಯವೆಂಬ ಪರಿಚ್ಛೇದದಲ್ಲಿ ವಿವರಣೆಯಿದೆ. ಈ ಧರ್ಮಕ್ಕೆ ಮುಖ್ಯವಾದುದು ಭಕ್ತಿ. ಭಕ್ತಿಯ ಅಗತ್ಯವನ್ನೂ ಸ್ವಾರಸ್ಯವನ್ನೂ ಮನಗಾಣಿಸಲೆಂದೇ ಸಂಗೀತ ಅದಕ್ಕೆ ಹೊಂದಿಕೊಂಡಿರುವುದು. ಭಕ್ತಿಯ ಬಲವಿಲ್ಲದೆ ತಂಬೂರಿ ಮೀಟಿಕೊಂಡು ಹಾಡಿದರೆ ಅವನು ಹರಿದಾಸನಲ್ಲ.

**ಯಾಯಿವಾರ –** ಧರ್ಮದ ಅನುಷ್ಠಾನದಲ್ಲಿ ದಿನವೂ ಊರೂರು ತಿರುಗುತ್ತ ಭಿಕ್ಷೆ ಬೇಡಿ ಹೊಟ್ಟೆಹೊರೆದುಕೊಂಡು ತೃಪ್ತರಾಗಿರುವವರಿಗೆ 'ಯಾಯಾವರ'ರೆಂದು ಹೆಸರು. ಭಾಗವತಕ್ಕೆ ಶ್ರೀಧರ ಸ್ವಾಮಿ ಬರೆದಿರುವ ಟೀಕೆಯಲ್ಲಿ 'ಯಾಯಾವರಂ ಪ್ರತ್ಯಹಂ ಧಾನ್ಯಯಾಂಚಾ' ಎಂದು ವಿವರಣೆಯಿದೆ. ಇದೇ ಕನ್ನಡದಲ್ಲಿ 'ಯಾಯಿವಾರ'ವಾಗಿರುವುದು. ಭಾಗವತರು ಹೀಗೆ ದಿನವೂ ತಿರುಗಾಡಿ ಹಲವಾರು ಗೃಹಸ್ಥರ ಮನೆಗಳಿಂದ ಪಡೆದುಕೊಂಡ ಆಹಾರ ಸಾಮಗ್ರಿಯನ್ನು ಮನೆಗೆ ತಂದು, ಭಗವದ್ಭಕ್ತರನ್ನೂ ಭಾಗವತರನ್ನೂ ಕರೆದು ಉಣಬಡಿಸುವರು. ಹಾಗೆ ಮಾಡಿ ತಿರಿದು ತಂದದ್ದನ್ನೆಲ್ಲ ತಾನೇ ಉಂಡು ನಲಿಯುವುದನ್ನು ಇಲ್ಲಿ ಜರಿಯಲಾಗಿದೆ.

**ಪಾಠಕ –** ಸ್ತುತಿ ಪಾಠಕರು ಅಥವಾ ಭಟ್ಟಂಗಿಗಳು. ಅರಸರ ಆಸ್ಥಾನಗಳಲ್ಲಿ ಅರಸನ ಗುಣಕೀರ್ತನೆಗೆಂದು ಸಂಬಳಕ್ಕೆ ಇರುವ ಹೊಗಳು ಭಟ್ಟರು. ಅರಸನ ಗುಣ ಇದ್ದರೂ ಸರಿ, ಇಲ್ಲದಿದ್ದರೂ ಸರಿ, ಅವನು ಕೊಡುವ ಹಣಕ್ಕೆ ಆಸೆಪಟ್ಟು ಅವನನ್ನು ಯಥೇಚ್ಛವಾಗಿ ಹೊಗಳುವುದು ಇವರ ವೃತ್ತಿ. ಹೀಗೆ ಹೃದಯ ಸಂಸ್ಕಾರವಿಲ್ಲದೆ, ಮಹಾತ್ಮ್ಯ ಜ್ಞಾನವಿಲ್ಲದೆ ಹರಿಗುಣ ಕೀರ್ತನೆಯನ್ನು ಜೀವನೋಪಾಯಕ್ಕಾಗಿ ಕೈಗೊಳ್ಳುವವರನ್ನು ಇಲ್ಲಿ ಖಂಡಿಸಿದ್ದಾರೆ.

**ಕೂಟಜನ –** ಪರಿಷೆಯಲ್ಲಿ ನೆರೆಯುವ ಪಾಮರರು; ಸಂಸ್ಕಾರವಿಲ್ಲದವರು; ವಿವೇಕ ಬುದ್ಧಿ ಸಾಲದವರು.

**ಗೂಟನಾಮಗಳು** – ಸಂಸ್ಕೃತದಲ್ಲಿ ಊರ್ಧ್ವಪುಂಡ್ರ. ದೇಹದ ಹಣೆ, ಕತ್ತು, ಎದೆ, ಹೊಟ್ಟೆ, ಭುಜಗಳು, ಬೆನ್ನು, ಕಿವಿಯ ಹಿಂಭಾಗ. ಈ ಸ್ಥಳಗಳಲ್ಲಿ ಗೋಪಿ ಚಂದನದ ಹನ್ನೆರಡು ನಾಮಗಳನ್ನು ದೇವರ ಹೆಸರುಗಳಿಂದ ಧರಿಸುವುದು ಭಾಗವತ ಸಂಪ್ರದಾಯದಲ್ಲಿದೆ.

**ತೂಟಕ** – ಕಳ್ಳತನ (ತುಡುಗು), ಮೋಸ.

**ನಿಗಮವೇದ್ಯನ** – ಭಗವಂತನನ್ನು ಅರಿಯಲು ಪ್ರತ್ಯಕ್ಷವಾಗಲೀ ಅನುಮಾನವಾಗಲೀ ನೆರವಾಗದೆ ಶ್ರುತಿಯೊಂದೇ ಕಾರಣವಾಗುವುದರಿಂದ ಭಗವಂತನನ್ನು 'ಸದಾಗಮೈಕವೇದ್ಯ'ನೆಂದು ಮಧ್ವಾಚಾರ್ಯರು ಹೇಳಿದ್ದಾರೆ.

**ವಾತಸುತನಲ್ಲಿಹನ** – ವಾತಸುತನೆಂದರೆ ಹನುಮಂತ, ಮುಖ್ಯಪ್ರಾಣ, ಅವನ ಅವತಾರವೇ ಮಧ್ವಾಚಾರ್ಯರೆಂದು ನಂಬಿಕೆ. ಮುಖ್ಯಪ್ರಾಣನಲ್ಲಿ ಅಂತರ್ಯಾಮಿಯಾಗಿ ಪ್ರೇರಕನಾಗಿದ್ದುಕೊಂಡು ಹರಿಯು ಅವನಿಂದ ಎಲ್ಲ ಕೆಲಸಗಳನ್ನೂ ಮಾಡಿಸುವನೆಂದು ನಂಬಿಕೆ. ಅದಕ್ಕಾಗಿಯೇ 'ಭಾರತೀರಮಣ ಮುಖ್ಯಪ್ರಾಣಾಂತರ್ಗತ'ನೆಂಬ ಒಕ್ಕಣೆಯಿರುವುದು; 'ಶ್ರೀಮನ್ಮಧ್ವಾಚಾರ್ಯ ಹೃತ್ಕಮಲ ಮಧ್ಯ ನಿವಾಸಿ'ಯೆಂದೂ ನಾರಾಯಣನ ವರ್ಣನೆಯಿದೆ.

**ಗೀತ ನರ್ತನದಿಂದ** – ಹರಿದಾಸ ಪಂಥದಲ್ಲಿ ಸಂಕೀರ್ತನವೇ ಮುಖ್ಯವಾದ ಸಾಧನೆ. ಭಾವದ ಭರದಲ್ಲಿ ನರ್ತನವೂ ಸೇರುತ್ತದೆ. ಪುರಂದರ ದಾಸರೇ ಒಂದೆಡೆ

ತಾಳ ದಂಡಿಗೆ ನೃತ್ಯಗೀತ ಸಮ್ಮೇಳದಿ
ಊಳಿಗವನು ಮಾಳ್ಪ ಹರಿದಾಸರ

ಎಂದಿದ್ದಾರೆ. ವಿಜಯದಾಸರ ವೆಂಕಟೇಶಸ್ತೋತ್ರದಲ್ಲಿ

ದಂಡಿಗೆ ಶಂಖ ತಾಳ ತಂಬೂರಿ ಜಾಗಟೆಯ
ಗೊಂಡು ನಿನ್ನಯ ಪರಮ ಪ್ರೀತ್ಯರ್ಥ ದಾಸರು
ಹಿಂಡು ಹಿಂಡಾಗಿ ಸಮ್ಮೊಗನಾಗಿ ನಿಂದುಬೊಮ್ಮಾಂಡ ಕಟಹ ಬಿಚ್ಚುವಂತೆ
ತಂಡ ತಂಡದಿ ಗೆಜ್ಜೆ ಕಟ್ಟಿ ಅಭಿನಯ ತಿರುಹಿ
ಕೊಂಡಾಡೆ ಶಬ್ದ ಪ್ರತಿಶಬ್ದವಾಗುತಿದೆ ಭೂ
ಮಂಡಲದೊಳಗೆ ಈ ಸೊಬಗ ಬಲ್ಲವರಾರು ಕುಂಡಲ ಗಿರಿವಾಸ

ಎಂದು ಒಕ್ಕಣೆಯಿದೆ.

**ಕೃಷ್ಣನ್ನ** – ಕೃಷ್ಣ, ಶ್ರೀಕೃಷ್ಣ, ಸಿರಿಕೃಷ್ಣ ಎಂಬುದು ವ್ಯಾಸತೀರ್ಥರ ಕಾವ್ಯಾಂಕಿತ.

(ಈ ಕೃತಿಯು ವಿಜಯದಾಸರ ಕಾಲಕ್ಕೂ ಪ್ರಸಿದ್ಧವಾಗಿದ್ದಿತು. ಅವರ ಒಂದು ಸುಳಾದಿಯಲ್ಲಿ ಇದರ ಮೊದಲ ಸಾಲನ್ನು ಉಲ್ಲೇಖಿಸಿದ್ದಾರೆ. ಮಟ್ಟ ತಾಳದ 'ವ್ಯಾಸರಾಯರ ಉಪದೇಶವನ್ನೇ ಕೊಂಡು' ಎಂಬ ಭಾಗದಲ್ಲಿ:
'ದೇಶದೊಳಗೆ ಮೆರೆದು ನಾಶರಹಿತ ರಂಗ ವಿಜಯ ವಿಠಲನ್ನ ದಾಸರೆಂದರೆ ಪುರಂದರ ದಾಸರೆನಿಸುತ್ತ')

**Classification:** Keerthane
**Ankita:** Sri Krishna
**Location:** NA
**Category:** Purandara Namana
**Sub-Category:** Krishna, Vasudeva, tulasi, mane, haNa, rokka, smarane, tamboori, samsara, jana, santosha, kalla, puje,
**Pravachana:** NA
**Explanation:** NA